ತೆಗೆದುಕೊಂಡು ಏನು ಮಾಡಲಿ ಅದಕ್ಕೆ ಎಷ್ಟು ಬೆಲೆಯಾಗುವುದೋ ಅಷ್ಟು ದುಡ್ಡನ್ನೇ ಕೊಡಿ' ಎಂದು ಅಮ್ಮ ಕೇಳಿ ದುಡ್ಡನ್ನೇ ತೆಗೆದುಕೊಂಡರು. ಅದೇ ದುಡ್ಡು ಅಡ್ಮಿಶನ್ ಫೀ ಹಾಗೂ ಹೋಗಿ ಬರುವ ಖರ್ಚಿಗಾಯಿತು. ನಾಲ್ಕು ಜೊತೆ ಬಟ್ಟೆ ಹೊಲಿಸಲೂ ಸಾಧ್ಯವಾಯಿತು. ಹೊಸ ಚಪ್ಪಲಿ ಹಾಗೂ ಒಂದು ಸೂಟ್‌ಕೇಸನ್ನು ಕೊಂಡು ಕೊಂಡ. ಉಳಿದ ದುಡ್ಡನ್ನು ಫಿಕ್ಸ್ ಡಿಪಾಜಿಟ್ಟನಲ್ಲಿಟ್ಟು ತಿಂಗಳ ಖರ್ಚಿನ ವ್ಯವಸ್ಥೆ ಮಾಡಲಾಯಿತು. ಮೊದಲೇನೋ ಹಾಸ್ಟೆಲಿನಲ್ಲಿರಬೇಕೆಂದೇ ಯೋಚಿಸಿದ, ಆದರೆ ಎರಡು ತಿಂಗಳಿಗೇ ಖರ್ಚನ್ನು ನಿಭಾಯಿಸುವುದು ಕಷ್ಟವೆನಿಸಿತು. ದೀಪಾವಳಿಯ ರಜೆ ಮುಗಿಸಿ ಊರಿನಿಂದ ವಾಪಸ್ ಬಂದೊಡನೇ ರೂಂ ಹುಡುಕಲು ಶುರು ಮಾಡಿದ. ಅವನ ಸ್ನೇಹಿತನೊಬ್ಬ ಈ ಮನೆಯ ವಿಳಾಸ ತಿಳಿಸಿ 'ಮನೆಯ ಮಾಲೀಕರು ತುಂಬ ಒಳ್ಳೆಯವರು. ಬಡ ವಿದ್ಯಾರ್ಥಿಗಳಿಗೆ ಕಡಿಮೆ ಬಾಡಿಗೆಯಲ್ಲಿ ರೂಂ ಕೊಡುತ್ತಾರೆ' ಎಂದು ಹೇಳಿದ. ದೀಪಕ್ ತಕ್ಷಣ ವಿಳಾಸ ಹುಡುಕಿಕೊಂಡು ಹೋದ. ರೂಂ ಏನೋ ಖಾಲಿ ಇತ್ತು. ಆದರೆ ಮನೆಯ ಮಾಲೀಕರು 'ಸಿಗರೇಟು ಸೇದುವ ಹಾಗಿಲ್ಲ, ಶರಾಬು ಮುಟ್ಟಕೂಡದು, ರೂಮಿಗೆ ಹುಡುಗಿಯರನ್ನು ಕರೆದುಕೊಂಡು ಬರಕೂಡದು. ರಾತ್ರಿ ರೇಡಿಯೊ ಹಾಕ ಕೂಡದು.' ಹೀಗೆ ಅನೇಕ ಶರತ್ತುಗಳನ್ನು ಹಾಕಿದರು. ಅವರ ಶರತ್ತುಗಳನ್ನು ಕೇಳಿ ದೀಪಕ್, 'ಅಂಕಲ್, ನಾನು ತಂದೆ ಇಲ್ಲದ ಪರದೇಶಿ; ಅಣ್ಣನ ಸಹಾಯದಿಂದ ಓದುತ್ತಿದ್ದೇನೆ. ಅವರು ಫೀಜಿಗಾಗಿ ಮಾತ್ರ ದುಡ್ಡು ಕೊಡುತ್ತಾರೆ. ಊಟದ ಹಾಗೂ ಬೇರೆ ಖರ್ಚಿಗಾಗಿ ಅಮ್ಮ ಹೇಗೋ ಹಣ ಹೊಂದಿಸುತ್ತಾರೆ. ನನಗೆ ಸಿಗರೇಟು, ಶರಾಬಿನಂಥ ಯಾವ ದುಶ್ಚಟಗಳೂ ಇಲ್ಲ' ಎಂದ. ಅವನ ಮಾತನ್ನು ಕೇಳಿ ಮಾಲೀಕರಿಗೆ ಸಂತೋಷವಾಯಿತು. ದೀಪಕ್‌ನ ಬೆನ್ನು ತಟ್ಟುತ್ತ ಅವರು 'ಸರಿ ಹಾಗಾದರೆ, ನಾಳೆಯೇ ನಿನ್ನ ಸಾಮಾನು ತೆಗೆದು ಕೊಂಡು ಬಾ' ಎಂದರು.

ಮರುದಿನ ದೀಪಕ್ ಬಂದು ಬಾಗಿಲು ತಟ್ಟಿದಾಗ ಒಬ್ಬ ಮಧ್ಯ ಮಯಸ್ಸಿನ ಮಹಿಳೆ ಬಂದು ಬಾಗಿಲು ತೆರೆದಳು.

'ಆಂಟೀ, ನಾನು ನಿಮ್ಮ ರೂಂ...'

'ನನ್ನನ್ನು ಆಂಟಿ–ವಾಂಟಿ ಎಂದು ಕರೆಯಬೇಡ' ಎಂದು ಅವಳು ಸಿಡುಕಿದಳು. ಶಹರದಲ್ಲಿ ಹೀಗೆ ಕರೆಯುವುದೇ ಸಭ್ಯತೆ ಏನೋ ಎಂದುಕೊಂಡಿದ್ದ ದೀಪಕ ಅವಳ ಕಡೆಗೆ ಆಶ್ಚರ್ಯದಿಂದ ನೋಡಿದ. ಸಾಂಪ್ರದಾಯಿಕ ಉಡುಗೆ ತೊಡುಗೆಯ ಲಕ್ಷಣವಾದ ಹೆಂಗಸು. ಅವನು ಹೆದರುತ್ತ – 'ಚಿಕ್ಕಮ್ಮ ಎಂದು ಕರೆಯಬಹುದೇ?' 'ಆಗಬಹುದು.' ಅದೇ ಸಮಯಕ್ಕೆ ಮನೆಯ ಯಜಮಾನ ಬಂದು 'ಅರೆ, ಹುಡುಗ ಸಾಮಾನು ತೆಗೆದುಕೊಂಡು ಬಂದು ಬಾಗಿಲಲ್ಲಿ ನಿಂತಿದ್ದಾನೆ. ಒಳಗೆ ಕರೆಯ ಬಾರದೇ?' 'ನೀವಲ್ಲಿ ಕುಳಿತು ಕೊಂಡು ಯಾವ ಮೂರ್ತಿ ಕಡೆಯುತ್ತಿದ್ದಿರಿ? ರಿಟಾಯರಾಗಿ ಮನೆಯಲ್ಲಿ ಕುಳಿತಿದ್ದೀರಿ. ಹೊರಗೆ ಯಾರು ಬಂದಿರುವರೆಂದು ನೋಡಲಿಕ್ಕೂ ಆಗುವುದಿಲ್ಲವೇ? ಮಾಡುವ ಕೆಲಸ ಬಿಟ್ಟು ನಾನೇ ಬಂದು ಬಾಗಿಲು ತೆಗೆಯಬೇಕು' ಅವಳು ಸಿಟ್ಟಿನಿಂದ ಒಳಗೆ ಹೊರಟು ಹೋದಳು. ಇಂಥ ಕೋಪಿಷ್ಠ ಹೆಂಗಸಿನೊಡನೆ ಹೇಗಪ್ಪ ನಿಭಾಯಿಸುವುದು! ಎಂದು ದೀಪಕನಿಗೆ ಚಿಂತೆಯಾಯಿತು. ಮರುದಿನ ಬೆಳಿಗ್ಗೆ ಬೇಗ ಎದ್ದು ಸ್ನಾನ ಮಾಡಿ ಹೊರಗೆ ಬಂದಾಗ ಮನೆಯ ಯಜಮಾನಿ ಎದುರಾದಳು. 'ಚಹ ಕುಡಿದೆಯಾ?' ಕೇಳಿದಳು. ಅವನು ಹೆದರುತ್ತ, 'ಇಲ್ಲಮ್ಮ ಈಗ ಹೋಟೆಲಿಗೆ ಹೋಗಿ ಕುಡಿಯುತ್ತೇನೆ'.

'ಇಷ್ಟು ಬೇಗ ನಿನಗೆ ಯಾವ ಹೋಟೆಲು ತೆಗೆದಿರುತ್ತದೆ ಒಳಗೆ ನಡೆ' ಎಂದು ಅವನನ್ನು ಅಡಿಗೆ ಕೋಣೆಗೆ ಕರೆದುಕೊಂಡು ಹೋಗಿ ಬಿಸಿ ಬಿಸಿ ಚಹದ ಕಪ್ಪನ್ನು ಕೊಟ್ಟಳು. ಚಹ ಕುಡಿಯುತ್ತ – 'ನಾನು ಸುಮ್ಮನೆ ಏಕೆ ಹೆದರಿಕೊಂಡೆ. ಇವಳೂ ನನ್ನಮ್ಮನಂತೆಯೇ ಇದ್ದಾಳೆ' ಎಂದುಕೊಂಡ.

ಈ ಒಂದು ವರ್ಷದಲ್ಲಿ ಅವನಿಗೆ ಇಂಥ ಅನೇಕ ಅನುಭವಗಳಾಗಿವೆ. ಹೊರಗೆ ಒರಟೊರಟಾಗಿ